ಮಾಡಲಾಗಿದೆ ಅಂತ ಹೇಳಿ ಇಂಜಿನೀಯರ್ ಬಿಲ್ ತೆಗೆದುಕೊಂಡಿದ್ದಾರೆ ಆದರೆ ಕಂಟ್ರಾಕ್ಟರ್‌ಗೆ ಇದುವರೆಗೂ ಹಣ ಕೊಟ್ಟಿಲ್ಲ. ಭೂಸ್ವಾಧೀನ ಇವತ್ತಿನವರೆಗೂ ಕೂಡ ಆಗಿಲ್ಲ. ಪೂರ್ವಭಾಗದಲ್ಲಿ ಆಗಿದೆ ಅಂತ ಹೇಳಿದ್ದಾರೆ ಇದುವರೆಗೂ ಒಂದೇ ಒಂದು ನೋಟಿಫಿಕೇಷನ್ ಸಹ ಬಂದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಈಗ ಸಾಲ ಬಂದಿದೆ. ನೋಟಿಫಿಕೇಶನ್ ಆಗದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೇ ಈ ರೀತಿ ಹೇಳಿದರೆ ಇದು ಎಷ್ಟು ಔಚಿತ್ಯ?

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ 6 ಕಿಲೋಮೀಟರ್ ರಸ್ತೆಯನ್ನು ಮೂಡಾದಿಂದ ಮಾಡಿರತಕ್ಕಂಥಾದ್ದು. ಫೋರ್ ಒನ್ ನೋಟಿಫಿಕೇಶನ್ ಈಗಾಗಲೇ ಕೊಟ್ಟಿದ್ದೇನೆ. ಫೋರ್ ಒನ್ ನೋಟಿಫಿಕೇಶನ್ ಆಗಿ ಅಕ್ವಿಜೆಶನ್ ಪ್ರೊಸೀಡಿಂಗ್ಸ್‌ನ್ನು ಇನ್‌ಷಿಯೇಟ್ ಮಾಡಿದ್ದೇವೆ. ಈ ವರ್ಷದ ಕೊನೆಗೆ ಎಡಿಪಿ ಮತ್ತು ಎಂಬಯು ಎಲ್ಲಾ ಮುಗಿಯುತ್ತಾ ಇರುವುದರಿಂದ 1997ರಲ್ಲಿ ಇದನ್ನು ಪ್ರಾರಂಭ ಮಾಡುತ್ತೇವೆ. ಪ್ರಿಲಿಮಿನರಿ ನೋಟಿಫಿಕೇಶನ್ ಅಕ್ವಿಜೇಶನ್ ಆದ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೇ ಪ್ರಭಾವಿ ರಾಜಕಾರಣಿ ಒಬ್ಬರಿಗೆ ರಿಂಗ್ ರೋಡ್‌ನಲ್ಲಿ ಬರುವಂತಹ ಪ್ರದೇಶವನ್ನು ಸರ್ಕಾರ ಡಿನೋಟಿಫೈ ಮಾಡಿದೆ. ಅವರಿಗೆ ಭೂಮಿಯನ್ನು ಬಿಟ್ಟು ಕೊಟ್ಟಿದೆ.

ಅಧ್ಯಕ್ಷರು:- ಯಾರು ಆ ಪ್ರಭಾವಿ ರಾಜಕಾರಣಿ ಹೇಳಿ? ಇಂತಹ ಸರ್ವೇ ನಂಬರ್ ಅಂತ ಹೇಳಿದರೆ ಹೌದೋ ಅಥವ ಅಲ್ಲವೋ ಎಂದು ಅವರು ಹೇಳುತ್ತಾರೆ. ಎಲ್ಲರೂ ಪ್ರಭಾವಿ ರಾಜಕಾರಣಿಗಳೇ

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೇ ಇಣಕಲ್ಲು ಗ್ರಾಮದ 149ನೇ ಸರ್ವೆ ನಂಬರು ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದರೂ ಕೂಡ ಅದು ಅವರಿಗೆ ಬಿಟ್ಟುಕೊಡುವಂತಹ ಕೆಲಸ ಆಗಿದೆ.

ಅಧ್ಯಕ್ಷರು:- ಅವರು ಪರ್ಟಿಕ್ಯುಲರ್ ಸರ್ವೆ ನಂಬರು ಏನು ಹೇಳುತ್ತಾರೆ ಅದನ್ನು ತಾವು ದಯವಿಟ್ಟು ವೆರಿಫೈ ಮಾಡಿ.

ಶ್ರೀ ಬಿ.ಎನ್.ಬಚ್ಚೇಗೌಡ:- ಯಾವ ಪ್ರಭಾವಿ ರಾಜಕಾರಣಿಗೂ ಒಳಗಾಗುವುದಿಲ್ಲ. ಏನು ಔಟರ್ ರಿಂಗ್ ಮಾಡಬೇಕೆಂದು ಇದ್ದೇವೆಯೋ ಇವೆಲ್ಲವನ್ನು ತೆರವು ಮಾಡಿ ಅದನ್ನು ಮಾಡಿಯೇ ಮಾಡುತ್ತೇವೆ. ಅದರ ಬಗ್ಗೆ ತಾವೇನು ಯೋಚನೆ ಮಾಡುವ ಅವಶ್ಯಕತೆ ಇಲ್ಲ.

ವಿಷಯ:- ಹುಬ್ಬಳ್ಳಿನಗರದ ಉಣಕಲ್ ಕೆರೆಯ ಶುದ್ಧೀಕರಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 138 (674)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ):- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿನಗರದ ಉಣಕಲ್ ಕೆರೆಯ ನೀರು ಕಲುಷಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಕೆರೆಗೆ ಸುತ್ತಮುತ್ತಲಿನ ಚರಂಡಿ ನೀರು ಮಳೆ ನೀರು ಹರಿದು ಬರುತ್ತಿರುವುದು ಹಾಗೂ ಕೆರೆಯಲ್ಲಿ ನಾಗರೀಕರು ಜಳಕ ಮಾಡುವುದು, ಅರಿವೆ ಒಗೆಯುತ್ತಿರುವುದು, ಎಮ್ಮೆ ತೊಳೆಯುವುದು, ಈ ರೀತಿ ಗಲೀಜು ಮಾಡುತ್ತಿರುವುದು ನಿಜವಲ್ಲವೇ?

ಇ) ಈ ಕೆರೆಯನ್ನು ಶುದ್ಧೀಕರಿಸಿ, ಪ್ರವಾಸಿ ಆಕರ್ಷಕ ಸ್ಥಳವನ್ನಾಗಿ ಪರಿವರ್ತಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ನಿಜಾಮುದಿನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಬಂದಿದೆ.

ಆ) ನಿಜ.

ಇ) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದವರು ಕೆರೆಯ ಸುತ್ತಲೂ ಭಾಗಶಃ ತಂತಿ ಬೇಲಿ ಹಾಕಲಾಗಿದ್ದು, ಇನ್ನುಳಿದ ಭಾಗಕ್ಕೆ ತಂತಿ ಬೇಲಿ ಹಾಕಿ ಸಂರಕ್ಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರವಾಸಿ ಆಕರ್ಷಣಗಳಿಗೆ ಮಹಾನಗರ ಪಾಲಿಕೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದವರು ಕೂಡಿಕೊಂಡು ನೀರಿನ ಕಾರಂಜಿ, ಬೋಟಿಂಗ್ ಹಾಗೂ ವಿದ್ಯುತ್ ದೀಪ ಸೌಕರ್ಯಗಳನ್ನು ಒದಗಿಸಲಾಗಿದೆ. ನೀರು ಕಲುಷಿತವಾಗುವುದನ್ನು ತಡೆಗಟ್ಟಲು ಪ್ರತ್ಯೇಕ ಚರಂಡಿ ಯೋಜನೆ ಹಾಗೂ ಕೆರೆಯ ಕಾವಲನ್ನು ಹೆಚ್ಚಿಸುವ ಬಗ್ಗೆ ಯೋಜನೆ ಹಾಕಿಕೊಳ್ಳಲಾಗಿದೆ.

ಶ್ರೀ ಯು.ಬಿ.ಬಣಕಾರ್ (ಶ್ರೀ ಜಗದೀಶ್ ಶೆಟ್ಟರ್ ಅವರ ಪರವಾಗಿ):- ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಮಹಾನಗರಕ್ಕೆ ಕುಡಿಯುವ ನೀರು ಪೂರೈಸುವಂತಹ ಉಣಕಲ್ಲು ಕೆರೆ ನೀರು ಕಲುಷಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಅಂತ ಹೇಳುತ್ತಿದ್ದಾರೆ. ಅದೇ ರೀತಿ ಪ್ರತಿನಿತ್ಯ ಚರಂಡಿ ನೀರು, ಮತ್ತು ನಾಗರೀಕರು ಜಳಕ ಮಾಡುವುದು ಬಟ್ಟೆ ಒಗೆಯುವುದು ಮತ್ತು ಎಮ್ಮೆ ತೊಳೆಯುವುದು ಇದೆಲ್ಲ ಮಾಡುತ್ತಿರುವುದು ಕಂಡು ಬಂದಿದೆ ಎಂದು ಅವರು ಹೇಳಿದ್ದಾರೆ. ಆದರೆ ಇದನ್ನು ಬಂದ್ ಮಾಡಲು ಸರ್ಕಾರ ಏಷ್ಟು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ಹೇಳಿಲ್ಲ. ಪ್ರತಿನಿತ್ಯ ಇದು ನಡೆಯುತ್ತಿರುವುದು ಗೊತ್ತಿದ್ದರೂ ಸಹ ಏಕೆ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಿದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಮಿರಾಜುದ್ದೀನ್ ನಿಜಾಮುದ್ದೀನ್ ಪಟೇಲ್:- ಮಾನ್ಯ ಅಧ್ಯಕ್ಷರೇ ಉಣಕಲ್ಲು

ಕೆರೆಯಿಂದ ಕುಡಿಯುವ ನೀರು ಪೂರೈಕೆಯಲ್ಲಿ ಕಲುಷಿತಗೊಂಡಿದೆ ಎಂದು ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆ ಬಗ್ಗೆ ನಾವು ಈಗಾಗಲೇ ಆ ಟ್ಯಾಂಕ್‌ನ ಸುತ್ತಮುತ್ತಲು ಫೆನ್ಸಿಂಗ್ ಮಾಡುವಂತಹ ಕೆಲಸ ಈಗ ಆರಂಭ ಮಾಡಿದ್ದೇವೆ. ಅದೇ ರೀತಿಯಲ್ಲಿ ಕಾರಂಜಾ ಎಲೆಕ್ಟ್ರಿಸಿಟಿ ಮತ್ತು ಒಳಚರಂಡಿ ನೀರು ಬರುತ್ತಿದೆ ಅಂತ ಏನು ಹೇಳಿದ್ದಾರೆ. ಆ ಬಗ್ಗೆ ಸರ್ಕಾರ ಒಂದು ಹೊಸ ಪ್ರೊಪೋಜಲ್ ಮಾಡಿ ಹೊಸ ಒಳಚರಂಡಿ ವ್ಯವಸ್ಥೆಯನ್ನು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್:- ಮಾನ್ಯ ಅಧ್ಯಕ್ಷರೇ ಈಗಾಗಲೇ ಹುಬ್ಬಳ್ಳಿ ಧಾರವಾಡ ಪ್ರಾಧಿಕಾರದಿಂದ ಫೆನ್ಸಿಂಗ್ ಹಾಕಿದ್ದೇವೆಂದು ಹೇಳಿದ್ದೀರಿ. ಅದನ್ನು ಈಗಾಗಲೇ ಕಟ್ ಮಾಡುತ್ತಿದ್ದಾರೆ. ಇದು ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ? ಫೆನ್ಸಿಂಗ್ ಹಾಕಬೇಕಾದಂತಾದ್ದು ಬೇಕಾದಷ್ಟು ಪ್ರದೇಶ ಇದೆ. ಈ ಪ್ರಕಾರ ನೀವು ಬೇಲಿ ಹಾಕಿದರೆ ಜನ ದಿವಸ ಕಟ್ ಮಾಡುತ್ತಾರೆ. ಅವರಿಗೆ ಬಟ್ಟೆ ಒಗೆಯಲು ಬೇರೆ ಏನಾದರೂ ವ್ಯವಸ್ಥೆ ಮಾಡಿಕೊಡಬೇಕು. ದನಕರುಗಳು ತೊಳೆಯಲು ಏನಾದರೂ ವ್ಯವಸ್ಥೆ ಮಾಡಿಕೊಡಬೇಕು. ಆ ರೀತಿ ಮಾಡಿದರೆ ಆ ಬೇಲಿ ಉಳಿಯುತ್ತದೆ ಇಲ್ಲದಿದ್ದರೆ ಉಳಿಯುವುದಿಲ್ಲ. ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಮಿರಾಜುದ್ದೀನ್ ನಿಜಾಮುದ್ದೀನ್ ಪಟೇಲ್:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಲ್ಲಿ 50 ಪರ್ಸೆಂಟ್ ಫೆನ್ಸಿಂಗ್ ಕೆಲಸ ಆಗಿದೆ. ಇನ್ನುಳಿದ ಕೆಲಸವನ್ನು ನಾವು ಪೂರ್ಣ ಮಾಡುತ್ತೇವೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್:- ಹಾಕಿರುವ ಫೆನ್ಸಿಂಗ್ ಕಟ್ ಮಾಡುತ್ತಿದ್ದಾರೆ.

ಅಧ್ಯಕ್ಷರು:- ಬದಲಿ ವ್ಯವಸ್ಥೆ ಮಾಡಬೇಕು.

ಶ್ರೀ ಮಿರಾಜುದ್ದೀನ್ ನಿಜಾಮುದ್ದೀನ್ ಪಟೇಲ್:- ಮಾಡಿಸುತ್ತೇವೆ.

ವಿಷಯ:- ಹುಬ್ಬಳ್ಳಿ ಧಾರವಾಡದಲ್ಲಿ ನೀರಿನ ಸಮಸ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 139 (897)

ಶ್ರೀ ಅಶೋಕ ಕಾಟ್ವೆ (ಹುಬ್ಬಳ್ಳಿ ನಗರ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ 2ನೇ ಮಹಾನಗರವಾದ ಹುಬ್ಬಳ್ಳಿ-ಧಾರವಾಡದಲ್ಲಿ ನೀರಿನ ಸಮಸ್ಯೆ ವಿಪರೀತವಾಗಿದ್ದು ಇದನ್ನು ತಪ್ಪಿಸಲು ಸರ್ಕಾರದವರು ಪರಿಶೀಲಿಸುವರೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಪರಿಶೀಲಿಸಿದೆ.